ವಿಷ್ಣುನಾರಾಯಣ ಭಾತಖಂಡೆ ಅವರು ಮುಂಬಯಿಯಲ್ಲಿ ಸ್ಥಾಪಿಸಿದ 'ಅಖಿಲ ಭಾರತ ಗಂಧರ್ವ ಮಹಾವಿದ್ಯಾಲಯ ಮಂಡಳ' ಸಂಗೀತ ಶಿಕ್ಷಣವನ್ನು ಸಾರ್ವತ್ರಿಕಗೊಳಿಸಿತು. ಈ ಇಬ್ಬರು ಮಹಾನುಭಾವರು ಸಂಗೀತದ ಗುರುಕುಲ ಪದ್ಧತಿಯಲ್ಲಿರುವ ತೊಡಕುಗಳನ್ನು ಮನಗಂಡು ರಾಗಗಳ ಮಾಹಿತಿ ಸಹಿತ ಬಂದಿಶ್‌ಗಳನ್ನು ಸಂಗ್ರಹಿಸಿ ಹತ್ತಾರು ಸಂಪುಟಗಳನ್ನು ಪ್ರಕಟಿಸಿದರು. ಗುರುಕುಲ ಪದ್ಧತಿಯಲ್ಲಿ ಸಂಗೀತ ಕಲಿಕೆಯ ನ್ಯೂನತೆಗಳನ್ನು ಗಮನಿಸಿ ಅಕಾಡೆಮಿಕ್ ಸಂಗೀತ ಶಿಕ್ಷಣ ಹೆಚ್ಚು ಮಹತ್ವ ಪಡೆದುಕೊಂಡಿತು.

ಅಶ್ವಿನಿ ಭಿಡೆ, ಪ್ರಭಾ ಅತ್ರೆ, ನಂದಾಪಾಟೀಲ, ಡಾ. ಶಾಂತಾರಾಮ ಹೆಗಡೆ, ಡಾ. ಕಮಲ ಪುರಂದರೆ, ಡಾ.ರಾಜೀವ ಪುರಂದರೆ, ಡಾ.ಬಿಂದುಮಾಧವ ಪಾಠಕ್, ಡಾ.ಹಮೀದ ಖಾನ್, ಡಾ. ಶಾರದಾ ಹಾನಗಲ್, ಡಾ.ಸುಲಭದತ್ತ ನೀರಲಗಿ, ಡಾ.ಅಶೋಕ ಹುಗ್ಗಣ್ಣವರ ಮುಂತಾದವರು ಅಕಡೆಮಿಕ್ ಆಗಿ ಸಂಗೀತ ಕಲಿತು ಖ್ಯಾತನಾಮರಾಗಿದ್ದಾರೆ. ಈ ಎಲ್ಲ ನಿದರ್ಶನ ಗಮನಿಸಿದರೆ ಕಾಲೇಜಿನಲ್ಲಿ ಸಂಗೀತ ಕಲಿತು ಮುಂದೆ ಖ್ಯಾತನಾಮರಾಗಲು ಸಾಧ್ಯವಿದೆ. ಎಲ್ಲವೂ ಕಲಿಯುವವರ ಆಸಕ್ತಿಯನ್ನು ಅವಲಂಬಿಸಿದೆ.

◆ ಕಾಲೇಜುಗಳಲ್ಲಿ ಸಂಗೀತದ ಶಾಸ್ತ್ರ ಮತ್ತು ಪ್ರಾಯೋಗಿಕ ಪಾಠಗಳು ಸೃಜನಶೀಲತೆಯನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆಯೇ?

ಸಂಗೀತ ಮೂಲತಃ ಒಂದು ಪ್ರದರ್ಶಕ ಕಲೆ. ಸಾವಿರಾರು ವರ್ಷಗಳಿಂದ ಸಂಗೀತ ಪ್ರದರ್ಶನ ಆಗುತ್ತಲೇ ಇದೆ. ಶಾಸ್ತ್ರ ಮೊದಲೋ ಪ್ರಯೋಗ ಮೊದಲೋ ಎಂದು ಬಿಡಿಸಿ ಹೇಳಲಾಗದು. ಇವೆರಡರ ಸಂಬಂಧ ದೇಹ ಮತ್ತು ಆತ್ಮದಂತೆ. ಶಾಸ್ತ್ರವನ್ನು ಜಡವಾಗಿ ಯಾಂತ್ರಿಕವಾಗಿ ಉಪಯೋಗಿಸುವುದರಿಂದ ಗಾಯನ ನೀರಸವಾಗುತ್ತದೆ. ನುರಿತ ಗಾಯಕರಲ್ಲಿ ಶಾಸ್ತ್ರ ಮತ್ತು ಪ್ರಯೋಗ ಹದವಾಗಿ ಮಿಳಿತವಾಗಿರುತ್ತದೆ. ನಿರಂತರ ರಿಯಾಜ್, ವೇದಿಕೆ ಕಛೇರಿಗಳು ಸಂಗೀತದಲ್ಲಿ ಅದ್ಭುತ ಪವಾಡವನ್ನೇ ಸೃಷ್ಟಿಸುತ್ತದೆ.

◆ ಸಂಗೀತದ ಹೆಚ್ಚಿನ ಪ್ರಚಾರವನ್ನು ವಿವಿಗಳ ಮೂಲಕ ಹೇಗೆ ಮಾಡಬಹುದು? ಬೈಠಕ್, ಸಂಗೀತ ಕಛೇರಿಗಳ ಆಯೋಜನೆ, ಪುಸ್ತಕಗಳ ಪ್ರಕಟಣೆ... ಇತ್ಯಾದಿಗಳ ಮೂಲಕ ಸಂಗೀತದ ಹರವು ವಿಸ್ತಾರವಾಗಬಹುದೇ?

ವಿವಿಗಳ ಮೂಲಕ ಹೆಚ್ಚು ಹೆಚ್ಚು ಸಂಗೀತ ಪ್ರಚಾರ ಮಾಡಬಹುದು. ಬೈಠಕ್, ಸಂಗೀತ ಕಛೇರಿಗಳ ಆಯೋಜನೆ, ಕಾರ್ಯಾಗಾರ, ಪ್ರಕಟಣೆ, ವಿದ್ಯಾರ್ಥಿಗಳೊಂದಿಗೆ ಸಂವಾದ, ದಿಗ್ಗಜರನ್ನು ಕರೆಸಿ ವಿಚಾರಸಂಕಿರಣ, ಕಛೇರಿಗಳನ್ನು ನಡೆಸಿ ವಿದ್ಯಾರ್ಥಿಗಳನ್ನು ಹೆಚ್ಚು ಕ್ರಿಯಾಶೀಲಗೊಳಿಸಬಹುದು. ಹಂಪಿ ವಿವಿಯ ಮೊದಲ ಕುಲಪತಿ ಚಂದ್ರಶೇಖರ ಕಂಬಾರರು ದೂರದೃಷ್ಟಿಯಿಂದ ಸಂಗೀತ ಮತ್ತು ನೃತ್ಯ ವಿಭಾಗ ಆರಂಭಿಸಿದರು. ಈಗ ಕುಲಪತಿ ಮಲ್ಲಿಕಾ ಘಂಟಿ ಜತೆಗೂಡಿ ವಿಚಾರ ಸಂಕಿರಣ, ದಿಗ್ಗಜರ ಸಂಗೀತ ಕಛೇರಿ, ಸಂಗೀತಕ್ಕೆ ಪೂರಕವಾದ ಕಾರ್ಯಕ್ರಮಗಳನ್ನು ನಡೆಸುತ್ತಾ ಬಂದಿದ್ದೇವೆ.

◆ ಸಂಗೀತ ಕಲಿಕೆಗೆ ಆನ್‌ಲೈನ್ ಸೌಲಭ್ಯ ಈಗ ಸಾಕಷ್ಟು ಲಭ್ಯವಾಗುತ್ತಿವೆ. ಇದರಿಂದ ಒಬ್ಬ ಉತ್ತಮ ಗಾಯಕನಾಗಲು ಸಾಧ್ಯವೇ?

ಆನ್‌ಲೈನ್ ಸಂಗೀತ ಕಲಿಕೆ ಇದೀಗ ಲಭ್ಯ. ಆದರೆ ಆನ್‌ಲೈನ್‌ನಲ್ಲಿ ಕಲಿತು ಉತ್ತಮ ಗಾಯಕ ಆಗಲು ಸಾಧ್ಯವಿಲ್ಲ. ಇತರ ದೂರಸಂಪರ್ಕ ಪದವಿ ಶಿಕ್ಷಣದಂತೆ ಸಂಗೀತವನ್ನು ಕಲಿಯಲಾಗದು.

◆ ನಿಮ್ಮ ಸಂಗೀತ, ರಿಯಾಜ್, ಕಛೇರಿಗಳು, ಗುರುಗಳು, ಹಿರಿಯ ಸಂಗೀತ ವಿದ್ವಾಂಸರೊಂದಿಗಿನ ಒಡನಾಟದ ಬಗ್ಗೆ ತಿಳಿಸಿ.

ಆರನೇ ವರ್ಷದಿಂದ ಸಂಗೀತ ಕಲಿತೆ. ತಂದೆ ರಾಜಶೇಖರ ಜಂಗಮಶೆಟ್ಟಿ, ತಾಯಿ ಚಾರುಮತಿ ಮೂಲತಃ ಸಂಗೀತಪ್ರೇಮಿಗಳು. ಹಾಗಾಗಿ ಸಂಗೀತ ದಿಗ್ಗಜರಾದ ಬಸವರಾಜ ರಾಜಗುರು, ಪಂ.ಮನ್ಸೂರ್, ಬಾಳಪ್ಪ ಹುಕ್ಕೇರಿ, ಪಂಚಾಕ್ಷರಿ ಮತ್ತಿಗಟ್ಟಿ, ಸಿದ್ಧರಾಮ ಜಂಬಲದಿನ್ನಿ ಆಗಾಗ ಮನೆಗೆ ಬರುತ್ತಿದ್ದರು. ಹೀಗೆ ಬಂದು ಹೋಗುವ ದಿಗ್ಗಜರ ಪ್ರಭಾವ ನಮ್ಮ ಮೇಲೆ ಆಯಿತು. ನಾವು ಐದು ಜನ ಸಹೋದರಿಯರಲ್ಲಿ ನಾಲ್ವರು (ನಾನು, ಸವಿತಾ ಅಮರೇಶ್, ಸುಮಂಗಲಾ ಧೀರಜ್‌ಕುಮಾರ್, ಕವಿತಾ ಕಟ್ಟೀಮನಿ) ಸಂಗೀತಗಾರ್ತಿಯರಾಗಿ ರೂಪುಗೊಂಡಿದ್ದೇವೆ. ಕಂಠವನ್ನು ಶ್ರುತಿಬದ್ಧವಾಗಿಸಲು ದಿನನಿತ್ಯ ರಿಯಾಜ್ ಮಾಡುತ್ತೇನೆ. ಪ್ರತಿದಿನ ಓಂಕಾರ, ವರ್ಣಾಲಂಕಾರ, ಆಲಾಪ, ದೃತ್‌ಗತಿಯ ತಾನ್‌ಗಳ ಅಭ್ಯಾಸ ನಮ್ಮ ಸಂಗೀತಕ್ಕೆ ಶಕ್ತಿ, ಹೊಳಪು ತುಂಬುತ್ತದೆ. ■



## ಘರಾಣೆ-ಗಾಯನ

ಘರಾಣೆಗಳಲ್ಲಿಯೇ ಬಹಳ ಅಪರೂಪದ ಶೈಲಿಯಾಗಿರುವ ಜೈಪುರ ಗ್ವಾಲಿಯರ್ ಘರಾಣೆಯಲ್ಲಿ ಹಾಡುವ ಜಯದೇವಿ, ಧಾರವಾಡದ ಸುಪ್ರಸಿದ್ಧ ಗಾಯಕರಾದ ಡಾ. ಪಂಚಾಕ್ಷರಿ ಮತ್ತಿಗಟ್ಟಿ ಅವರಲ್ಲಿ ಅಭ್ಯಾಸ ಮಾಡಿದವರು. ಆದಾಗಿ ಇದೇ ಘರಾಣೆಯಲ್ಲಿ ಖ್ಯಾತರಾಗಿರುವ ಪುಣೆಯ ವಿದುಷಿ ಜಯಶ್ರೀ ಪಾಟ್ನೇಕರ್ ಅವರಲ್ಲಿಯೂ ಮಾರ್ಗದರ್ಶನ ಪಡೆದವರು. ಅಲ್ಲದೆ ಜೈಪುರ್–ಅತ್ರೌಲಿ ಘರಾಣೆ ಶೈಲಿಯಲ್ಲಿ ಸಂಗೀತವನ್ನು ಪಂ. ರಾಜಶೇಖರ ಮನ್ಸೂರ ಅವರ ಬಳಿಯೂ ಕಲಿತು ಹೆಚ್ಚಿನ ಪ್ರಭುತ್ವ ಸಾಧಿಸಿದರು.

ಸಾಗರದಾಚೆಯ ಒಮನ್, ಮಸ್ಕತ್, ಬಹರೇನ್‌ಗಳಲ್ಲದೆ ದೆಹಲಿ, ಪುದುಚೇರಿ, ಪುಣೆ, ಮುಂಬಯಿ, ರಾಜ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡೆಸುವ ಹಂಪಿ ಉತ್ಸವ, ಕುಂದಗೋಳದ ಸವಾಯ್ ಗಂಧರ್ವ ಉತ್ಸವ, ಮೈಸೂರು ದಸರಾ, ಲಕ್ಕುಂಡಿ ಉತ್ಸವ, ಕರಾವಳಿ ಉತ್ಸವ, ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಾಂಸ್ಕೃತಿಕ ವೇದಿಕೆಗಳಲ್ಲಿ ಜಯದೇವಿ ಕಛೇರಿ ನೀಡಿದ್ದಾರೆ.

ಸಂಗೀತ ಮುಂದಿನ ಪೀಳಿಗೆಗೂ ಉಳಿಯಬೇಕು ಎಂಬ ಮಹತ್ವಾಕಾಂಕ್ಷೆಯಿಂದ ಜಯದೇವಿ ಹಲವು ಧ್ವನಿಸಾಂದ್ರಿಕೆಗಳನ್ನೂ ಹೊರತಂದಿದ್ದಾರೆ. ಹಿಂದೂಸ್ತಾನಿ ಗಾಯನದ 'ರಾಗರಂಗ, ಸುರ ಸುನಾದ, ಗೋಧೂಳಿ ಪ್ರಮುಖವಾದವು. ವಚನ ಗಾಯನದ 'ಗುರುವೇ ನಮೋ', ಭಕ್ತಿ ಬೆಳದಿಂಗಳು, ದಾಸವಾಣಿಯ 'ಹರಿನಾಮ ಸ್ಮರಣೆ', ಹಿಂದಿ ಭಜನ್‌ಗಳ 'ಸುನೋ ಭಾಯ್ ಸಾಧೋ , ಕನಕದಾಸರ ಕೀರ್ತನೆಗಳ 'ಕನಕ ಕೀರ್ತನೆ ಸುಧೆ', ಅಕ್ಕಮಹಾದೇವಿಯ ಕೃತಿಗಳನ್ನೊಳಗೊಂಡ 'ಶರಣೆ ಅಕ್ಕಮಹಾದೇವಿ ಸುಪ್ರಭಾತ' ಮುಂತಾದವುಗಳು ಪ್ರಮುಖವಾದವು.

ಸಂಗೀತದ ಸಂಪನ್ಮೂಲ ಕ್ರೋಢೀಕರಣಕ್ಕಾಗಿ ಸಂಗೀತ ಪುಸ್ತಕಗಳನ್ನು, ಸೋದಾಹರಣ ಭಾಷಣ, ಸಂಗೀತ ಬರಹಗಳನ್ನು ಜತನವಾಗಿ ಕಾಪಿಟ್ಟುಕೊಂಡು ಬಂದಿದ್ದಾರೆ. ರಾಷ್ಟ್ರಮಟ್ಟದ ಸಂಗೀತ ವಿಚಾರಸಂಕಿರಣಗಳಲ್ಲಿ ಭಾಗವಹಿಸಿ ಸಂಗೀತ ಪ್ರಾತ್ಯಕ್ಷಿಕೆಗಳನ್ನೂ ನಡೆಸಿಕೊಟ್ಟ ಅನುಭವ ಇವರಿಗಿದೆ. ಪಂ. ಮಲ್ಲಿಕಾರ್ಜುನ ಮನ್ಸೂರ ರಾಷ್ಟ್ರೀಯ ಯುವ ಪುರಸ್ಕಾರ, ಉಸ್ತಾದ ಬಿಸ್ಮಿಲ್ಲಾಖಾನ್ ಯುವ ಪ್ರಶಸ್ತಿ, ಸಿದ್ಧರಾಮ ಜಂಬಲದಿನ್ನಿ ವಚನ ಗಾಯನ ಪ್ರಶಸ್ತಿ ಮುಂತಾದವುಗಳಿಗೆ ಜಯದೇವಿ ಭಾಜನರಾಗಿದ್ದಾರೆ.